ISSN: 2582-2284

ಸಂಪುಟ 2 ಸಂಚಿಕೆ 5 ಮಾರ್ಚ್–ಏಪ್ರಿಲ್ 2021

# ಪ್ರತಿಬಿಂಬ

## MULTIDISCIPLINARY KANNADA RESEARCH JOURNAL OF IIMRD

Peer Reviewed and Refereed Kannada Journal

IIMRD JOURNALS

ಭಾರತೀಯ ಬಹುಶಿಸ್ತೀಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ
ಮೈಸೂರು

| | ಅನುಕ್ರಮಣಿಕೆ | ಪು.ಸಂ |
|---|---|---|
| 1. | ಮೈಸೂರು ತಾಲೂಕಿನ ತಮಟೆ ವಾದನ ಕಲಾವಿದರ ಬದುಕು-ಬವಣೆ : ಅವಲೋಕನ<br>– ಸೋಮಣ್ಣ | 1 |
| 2. | ಮೈಸೂರು ಆಡಳಿತ ವಿಕೇಂದ್ರಿಕರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಪಾತ್ರ<br>– ಡಾ. ನೀಲಕಂಠಸ್ವಾಮಿ ಮಾಂಬಳ್ಳಿ | 8 |
| 3. | ಭಾರತದಲ್ಲಿ ಮಹಿಳಾ ಸಬಲೀಕರಣ: ಸಮಸ್ಯೆಗಳು, ಸವಾಲುಗಳು ಮತ್ತು ಸಾಧ್ಯತೆಗಳು<br>– ಡಾ. ಕೆ. ಶೈಲಜ<br>– ಡಾ. ಬಿ.ಆರ್.ಮಂಜುನಾಥ | 17 |
| 4. | ದಲಿತ ಸಾಹಿತ್ಯ : ಸಾಮಾಜಿಕ ಚಿಂತನೆಯ ಸ್ವರೂಪ<br>– ಭಾಸ್ಕರ ಮರಕಾಲ<br>– ಡಾ. ಎಸ್.ಬಿ. ರಾಠೋಡ | 24 |
| 5. | ಕರ್ನಾಟಕದಲ್ಲಿ ಆಹಾರ ಪೂರೈಕೆ ಮತ್ತು ಬಡತನ<br>– ಡಾ.ಎಲ್. ಶ್ರೀನಿವಾಸ<br>– ರಾಧಾ ಗಿರಿಯಪ್ಪ ಮಣ್ಣೂರ | 33 |
| 6. | ಹತ್ತಿಗಿರಣಿಗಳ ದುಡಿಮೆಗಾರರು: ದಾವಣಗೆರೆ ತಾಲೂಕು ಅನುಲಕ್ಷಿಸಿ<br>– ಪ್ರಕಾಶ್ ಎಚ್. ಬಿ<br>– ಡಾ.ದೊಡ್ಡಮನಿ ಲೋಕರಾಜ್ | 43 |
| 7. | ಗಾದೆಗಳಲ್ಲಿ ಗಂಡು-ಹೆಣ್ಣಿನ ಸಂಬಂಧ – ಅನುರಾಧ ಆರ್.<br>– ಡಾ. ಎಸ್. ಬಿ. ರಾಠೋಡ | 54 |
| 8. | ಮಂಗಳಮುಖಿಯರ ಸಾಂಸ್ಕೃತಿಕ ಆಚರಣೆಗಳು: ಸಮಾಜಶಾಸ್ತ್ರೀಯ ವಿಶ್ಲೇಷಣೆ<br>– ಪ್ರತಾಪ ವಿ<br>– ಡಾ. ಎಸ್. ಯಶೋದ | 62 |
| 9. | ಕನ್ನಡ ವಿಮರ್ಶೆಯ ಹೆಜ್ಜೆ ಗುರುತುಗಳು – ಮಲ್ಲಿಕಾರ್ಜುನ ಎಚ್.ಎಂ<br>– ಡಾ. ಬಿ. ಪ್ರಭುಸ್ವಾಮಿ | 72 |
| 10. | ಗುಂಡ್ಲುಪೇಟೆ ತಾಲೂಕಿನ ಸಾಮಾಜಿಕ ಮತ್ತು ಆರ್ಥಿಕ ರೂಪುರೇಷೆಗಳು: ವಿಶ್ಲೇಷಣಾತ್ಮಕ ಅಧ್ಯಯನ<br>– ಡಾ. ಬಿ. ಆರ್. ಮಂಜುನಾಥ<br>– ಡಾ.ಶೈಲಜ ಕೆ | 86 |
| 11. | ಬಾಗಲಕೋಟೆ ಜಿಲ್ಲೆಯ ನೇಕಾರರ ಉದ್ಯಮ ವ್ಯವಸ್ಥೆ ಮತ್ತು ಸಮಸ್ಯೆಗಳು<br>– ಮಲ್ಲಿಕಾರ್ಜುನ ಮೊರಬದ<br>– ಡಾ. ಕುಮಾರ | 98 |

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 54-61
©IIMRD, Mysuru
IIMRD JOURNALS
www.iimrd.com

# ಗಾದೆಗಳಲ್ಲಿ ಗಂಡು-ಹೆಣ್ಣಿನ ಸಂಬಂಧ

ಅನುರಾಧ ಆರ್.[1] ಮತ್ತು ಡಾ. ಎಸ್. ಬಿ. ರಾಠೋಡ[2]

## ಪೀಠಿಕೆ

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಗಾದೆಗಳು ತುಂಬಾ ಪರಿಣಾಮಕಾರಿಯಾಗಿವೆ. ಗಾದೆಗಳನ್ನು ಮಾತಿನ ಮಧ್ಯೆ ಬಳಸುವುದು ವಾಡಿಕೆ. ಅವು ಕೆಲವು ಪ್ರಾಣಿಗಳಿಗೆ ಸಂಬಂಧಿಸಿದರೆ ಇನ್ನು ಕೆಲವು ಮನುಷ್ಯನಿಗೆ ಸಂಬಂಧಿಸಿದೆ. ಮನುಷ್ಯರು ದಾರಿ ತಪ್ಪಿದಾಗಲೆಲ್ಲ ಅವರನ್ನು ಗಾದೆ ಮಾತುಗಳ ಮೂಲಕ ಸರಿ ದಾರಿಗೆ ತರುವ ಪ್ರಯತ್ನ ನಡೆಯುತ್ತದೆ. ಅವು ಕೆಲವು ನಿಷ್ಠುರವಾಗಿ ಇನ್ನು ಕೆಲವು ಹಾಸ್ಯ ವಿಡಂಬನೆಯಿಂದ ಕೂಡಿರುತ್ತವೆ. ಗಾದೆಗಳನ್ನು ಮಾತುಗಳ ಮಧ್ಯೆ ಬಳಸುವುದರಿಂದ ಮಾತುಗಳಲ್ಲಿ ಆಕರ್ಷಣೆ ಉಂಟಾಗಿ ಕೇಳುಗರಿಗೆ ಹೊಸದೇನನ್ನೊ ಕೇಳುತ್ತಿದ್ದೇವೆ ಎನಿಸುತ್ತದೆ. ಅದರ ಒಳಾರ್ಥವನ್ನು ತಿಳಿದುಕೊಳ್ಳುವುದರ ಕಡೆಗೆ ನಮ್ಮ ಮನಸ್ಸು ಸಾಗುತ್ತದೆ. ಅವುಗಳಲ್ಲಿ ಕಾಣುವುದು ನಮ್ಮ ನಮ್ಮ ಪ್ರತಿಬಿಂಬಗಳೇ ಆಗಿವೆ. ಗಂಡು ಹೆಣ್ಣುಗಳ, ಸೋಮಾರಿಗಳ, ಉದ್ಯೋಗಸ್ಥರ ಸಹಜ ಸ್ವಭಾವಗಳನ್ನು ಎತ್ತಿ ತೋರಿಸುತ್ತವೆ. ಹೀಗೆ ತೋರಿಸುವಾಗ ಅವು ಸುಮ್ಮನೆ ಅವರ ಸ್ವಭಾವಗಳನ್ನು ದಾಖಲಿಸದೆ ಮೂದಲಿಸುತ್ತವೆ. ಸಂಬಂಧಗಳನ್ನು ಪರಿಚಯಿಸಿ ಬೆಸೆಯುತ್ತವೆ. ಅದಕ್ಕಾಗಿ ಗಾದೆಗಳು ಹೇಳುವವನಿಗೆ ರುಚಿ, ಹೇಳಿಸಿಕೊಳ್ಳುವವನಿಗೆ ಪ್ರಿಯ ಹೇಳಿದ ತಕ್ಷಣ ಗಾದೆಯ ಅರ್ಥ ಮನಸ್ಸಿಗೆ ಹೊಳೆದು ತನ್ನ ಪರಿಣಾಮವನ್ನು ಬೀರಿ ಉತ್ತಮ ಕೆಲಸವನ್ನು ಮಾಡಿದರೆ ಸಮಾಧಾನದಿಂದ ಇರುತ್ತೇವೆ. ತಪ್ಪುಗಳನ್ನು ಮಾಡಿದ್ದರೆ ತಿದ್ದಿ ನಡೆಯುವಂತೆ ಮಾಡುತ್ತವೆ. ಗಾದೆ ಒಳ್ಳೆಯವರ ಗುಣವನ್ನು ಹೊಗಳುವದಕ್ಕಿಂತ ಕೆಟ್ಟದ್ದರ ಪರಿಣಾಮವನ್ನು ಹೇಳಿ ಮಾನವೀಯ ಮೌಲ್ಯಗಳನ್ನು ಬಿತ್ತುತ್ತವೆ. ಗಾದೆಗಳ ಹಿಂದೆ ಒಂದು ಅನುಭವ ಇದ್ದೇ ಇದೆ. ಅದು ಸಾಮಾನ್ಯ ಜನರದಾಗಿರಬಹುದು ಅಥವಾ ಇತಿಹಾಸ ಪುರಾಣ ಮುಂತಾದವುಗಳಲ್ಲಿ ಕಾಣುವ ಒಂದು ಘಟನೆಯಾಗಿರಬಹುದು. ವಸ್ತು ಯಾವುದೇ ಆಗಿರಲಿ ಅದನ್ನು ಒಂದು ಸಂಕೇತವಾಗಿಟ್ಟುಕೊಂಡು ಅದರಲ್ಲಿ ಜೀವನದ ಅನುಭವವನ್ನು ಹೇಳುವ ಅದ್ಭುತ ಕಾರ್ಯವನ್ನು ಗಾದೆ ಮಾಡುತ್ತದೆ.

---

[1] ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

[2] ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ ಹಾಗೂ ಸಂಶೋಧನಾ ಮಾರ್ಗದರ್ಶಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.